# ಸಂಯೋಜನೆಗೆ ಸಂಬಂಧಿಸಿದ ಕರ್ನಾಟಕ ಸರ್ಕಾರದ ಆಜ್ಞೆಗಳು ಹಾಗೂ ಪತ್ರಗಳು

| ಕ್ರಸಂ | ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ | ಆದೇಶದ ಸಂಕ್ಷಿಪ್ತ ವಿವರ |
|---|---|---|
| 1. | ಇಡಿ 384 ಯುಎನ್ಇ 2020 ದಿ.18.02.2022 | * ಕಾಲೇಜುಗಳ ಶಿಕ್ಷಣ ಸಂಸ್ಥೆಗಳು ಹೊಂದಿರಬೇಕಾದ ಕನಿಷ್ಠ ಜಮೀನಿನ ವಿಸ್ತೀರ್ಣ ಮಿತಿ ಹಾಗೂ ಕಡ್ಡಾಯವಾಗಿ ಸಲ್ಲಿಸಬೇಕಾದ ಭೂ ದಾಖಲೇಗಳು.<br>* ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ಈಗಿರುವ ಕೋರ್ಸಗಳು ಮತ್ತು ಪ್ರವೇಶ ಮಿತಿಯಲ್ಲಿ ಬದಲಾವಣೆ ಮಾಡದೇ ಇದ್ದಲ್ಲಿ ಸದರೀ ಕನಿಷ್ಠ ಜಮೀನಿನ ಮಿತಿ ಆದೇಶ ಅನ್ವಯವಾಗುವುದಿಲ್ಲ. |
| 2. | ಇಡಿ 29 ಯುಎನ್ಇ 2021 ಬೆಂಗಳೂರು ದಿ.12.02.2021<br>ಮತ್ತು<br>ತಿದ್ದುಪಡಿ ಆದೇಶ ಇಡಿ 29 ಯುಎನ್ಇ 2021 ದಿ.16.02.2021 | ವಿವಿಧ ಸಂಯೋಜನಾ ಕಾರ್ಯಗಳಿಗೆ (ಮುಂದುವರಿಕೆ/ ವಿಸ್ತರಣೆ/ ಹೊಸ ಕಾಲೇಜು/ಕೋರ್ಸ್ ಹೊಸ ವಿಷಯ ಮುಂತಾದವು) ಕನಿಷ್ಠ ಸಂಯೋಜನಾ ಅಂಶಗಳನ್ನು ಅವಶ್ಯಕವಾಗಿ ಪಡೆಯುವ ಕುರಿತು. |
| 3. | ಇಡಿ 218 ಯುಎನ್ಇ 2020 ದಿ. 24.08.2020<br>ಮತ್ತು<br>ಇಡಿ 143 ಯುಬಿವಿ 2020 ದಿ. 22.10.2020 | ಕಾಲೇಜು ಕಟ್ಟಡದ ಸದೃಡತೆ/ ಸುರಕ್ಷತೆ ಕುರಿತು<br>a. National Building Code-2016 (NBC-2016) ರ ನಿಯಮಾನುಸಾರ ಲೋಕೋಪಯೋಗಿ ಇಲಾಖೆಯಿಂದ ಧೃಡೀಕರಣ ಪತ್ರ.<br>b. Fire Services Department (ಅಗ್ನಿಶಾಮಕ ಇಲಾಖೆ)ಯಿಂದ ಧೃಡೀಕರಣ ಪತ್ರ. |
| 4. | ಇಡಿ 21 ಯುಬಿವಿ 2004, ಬೆಂಗಳೂರು ದಿನಾಂಕ 15.05.2004 | ಪರಿಶಿಷ್ಟ ಜಾತಿ/ ಪಂಗಡಗಳ ಆಡಳಿತ ಮಂಡಳಿಗಳ ಕಾಲೇಜುಗಳಿಂದ ವಸೂಲು ಮಾಡುವ ಸಂಯೋಜನಾ ಶುಲ್ಕದಲ್ಲಿ ಶೇ.50 ರಷ್ಟು (50%) ರಿಯಾಯತಿ ನೀಡುವ ಕುರಿತು. |
| 5. | ಇಡಿ 34 ಇಜಿಒವಿ 2020(ಭಾಗ-2) ಬೆಂಗಳೂರು ದಿ.26.04.2022 | 2022-23 ರ ಸಾಲಿಗೆ ವಿಶ್ವವಿದ್ಯಾಲಯಗಳು ಸಂಯೋಜನಾ ಪ್ರಕ್ರಿಯೆ ಪ್ರಾರಂಭಿಸುವ ಕುರಿತು ಕರ್ನಾಟಕ ಸರ್ಕಾರದ ಆದೇಶ |
| 6. | ಇಡಿ 384 ಯುಎನ್ಇ 2020 ದಿ.30.12.2020 | ಕರ್ನಾಟಕ ರಾಜ್ಯದ ಸರ್ಕಾರಿ ಕಾಲೇಜುಗಳ ಸೀಟು ಹೆಚ್ಚಳ/ ಹೊಸ ಕೋರ್ಸ/ ಹೊಸ ವಿಷಯ ಪ್ರಾರಂಭಿಸಲು ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪೂರ್ವಾನುಮತಿ ಕಡ್ಡಾಯವಾಗಿರುತ್ತದೆ. |

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 384 ಯುಎನ್ಇ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 18.02.2022.

## ಸುತ್ತೋಲೆ

ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿನ ಹೊಸ ಕಾಲೇಜುಗಳ / ಹೊಸ ಕೋರ್ಸುಗಳ / ಪ್ರವೇಶ ಸಂಖ್ಯೆಯ ಹೆಚ್ಚಳ / ಸಂಯೋಜನೆ ಮುಂದುವರಿಕೆ/ ನವೀಕರಣ / ಸ್ಥಳ ಬದಲಾವಣೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ, ಯುಜಿಸಿ ರೆಗ್ಯುಲೇಷನ್‌ಗಳಲ್ಲಿ ಆಯಾ ಕಾಲೇಜುಗಳು ಹೊಂದಿರಬೇಕಾದ ಕನಿಷ್ಠ ಜಮೀನಿನ ಅರ್ಹತೆಗಳ ಬಗ್ಗೆ ಕೆಲವು ಬದಲಾವಣೆಗಳು ಅಗತ್ಯವೆಂದು ಪರಿಗಣಿಸಿ, ಹೊಸ ಕಾಲೇಜುಗಳ / ಹೊಸ ಕೋರ್ಸುಗಳ / ಪ್ರವೇಶ ಸಂಖ್ಯೆಯ ಹೆಚ್ಚಳ / ಸಂಯೋಜನೆ ಮುಂದುವರಿಕೆ/ ನವೀಕರಣ / ಸ್ಥಳ ಬದಲಾವಣೆ ಇತ್ಯಾದಿಗಳ ಬಗ್ಗೆ ಸರ್ಕಾರದ ಸಹಮತಿಗಾಗಿ ವಿಶ್ವವಿದ್ಯಾಲಯಗಳು ಕಳುಹಿಸುವ ಪ್ರಸ್ತಾವನೆಗಳಲ್ಲಿ ಆಯಾ ಸಂಸ್ಥೆ ಕಾಲೇಜುಗಳು ಹೊಂದಿರಬೇಕಾದ ಕನಿಷ್ಠ ವಿಸ್ತೀರ್ಣದ ಜಮೀನಿನ ಮಿತಿಯನ್ನು ಕೆಳಗಿನಂತೆ ಪರಿಷ್ಕರಿಸಿ, ಸೂಕ್ತ ಮಾನದಂಡಗಳನ್ನು ಅನುಸರಿಸಲು ಸೂಚಿಸಿದೆ.

**ಮಾನದಂಡಗಳು:-**

1. The college/institution shall hold undisputed ownership and possession of land free from any or all encumbrances, measuring.

   a. Not less than 0.5 acres if it is located in mega cities.
   b. 1 acre if it is located in BMRDA, city corporations and district head quarters.
   c. 1.5 acres if it is located in Municipalities or taluk head quarters.
   d. 3 acres if it is any other rural areas.

   Provided that these requirements shall not apply to colleges already affiliated to the university prior to the date of notification of UGC (Affiliation of colleges by the universities) Regulations 2009 and its amendments in 2012, only if the existing programmes and intakes of students are not altered.

2. The registered society/trust in justified exceptional cases may be allowed to start the college for the 1st year of the programs in a readily available building, provided the institute should have the required land at the place proposed to establish the college on a permanent basis as per para 1 above.

3. In the bond to be executed by the registered society/trust it shall be mentioned that after the college is affiliated, the same will not be shifted to different location or will not be transferred to a different society, Trust, individual or a group of individuals without the prior approval of the University, provided in the new place proposed for shifting the college, the minimum land required under para 1 above shall be ensured.

ಸದರಿ ಜಮೀನು ಆಯಾ ಸಂಸ್ಥೆ ಅಥವಾ ಕಾಲೇಜಿನ ಹೆಸರಿನಲ್ಲಿರುವುದೇ ಎಂಬುದಕ್ಕೆ, ಕೆಳಕಂಡ ದಾಖಲಾತಿಗಳನ್ನು ಕಳುಹಿಸತಕ್ಕದ್ದು:-

ಅಥವಾ

ಸದರಿ ಜಮೀನನ್ನು ಸಂಸ್ಥೆಯ/ಕಾಲೇಜಿನ ಹೆಸರಿಗೆ ಪಡೆದುಕೊಂಡಿರುವ ಬಗ್ಗೆ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಾಯಿತವಾಗಿರುವ (ಎ) ಕ್ರಯಪತ್ರ ಅಥವಾ (ಬಿ) 30 ವರ್ಷಗಳಿಂದ ಕಡಿಮೆ ಇಲ್ಲದ ಅವಧಿಯ ಲೀಸ್‌ಡೀಡ್ ಅಥವಾ (ಸಿ) ದಾನಪತ್ರ.

ಹೊಸ ಕಾಲೇಜುಗಳ ಸ್ಥಾಪನೆ, ಹೊಸ ಕೋರ್ಸುಗಳ ಪ್ರಾರಂಭ, ಪ್ರವೇಶ ಸಂಖ್ಯೆಯ ಹೆಚ್ಚಳ, ಸಂಯೋಜನೆ ಮುಂದುವರಿಕೆ/ನವೀಕರಣ, ಸ್ಥಳ/ಹೆಸರು ಬದಲಾವಣೆ ಇತ್ಯಾದಿಗಳ ಸಂಯೋಜನೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂ. ಇಡಿ 29 ಯುಎನ್ಇ 2021, ದಿನಾಂಕ:12.02.2021 ಹಾಗೂ 16.02.2021ರ ಆದೇಶಗಳ ಜೊತೆಗೆ ಕಾಲೇಜುಗಳ ಜಮೀನಿನ ವಿಸ್ತೀರ್ಣದ ಕುರಿತಂತೆ ಮೇಲ್ಕಂಡ ಮಾನದಂಡಗಳನ್ನು ಯಥಾವತ್ತಾಗಿ ಪಾಲಿಸುವುದು. ಒಂದು ವೇಳೆ ಈ ಮಾನದಂಡಗಳಲ್ಲಿ ವಿಧಿಸಿದ ಜಮೀನಿನ ವಿಸ್ತೀರ್ಣ ಕನಿಷ್ಠ ಮಿತಿಗಿಂತ ಕಡಿಮೆ ಇದ್ದಲ್ಲಿ, ಅಂತಹ ಪ್ರಸ್ತಾವನೆಯನ್ನು ಅನುಮೋದನೆಗೆ ಶಿಫಾರಸ್ಸು ಮಾಡತಕ್ಕದ್ದಲ್ಲ.

(ಶೀತಲ್ ಎಂ. ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ-1)

ಗೆ:

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
2. ಕುಲಪತಿಗಳು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
3. ಕುಲಸಚಿವರು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
4. ಹಣಕಾಸು ಅಧಿಕಾರಿಗಳು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
5. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು.
6. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ ಮಾಹಿತಿಗಾಗಿ:-

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-2), ಬಹುಮಹಡಿಗಳ ಕಟ್ಟಡ, ಬೆಂಗಳೂರು.

10-06-2021 ರ
ಆದೇಶ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಸಂಯೋಜನೆ, ಹೊಸ ಕೋರ್ಸ್ ಪ್ರಾರಂಭ, ಸಂಯೋಜನ ಮುಂದುವರಿಕೆ, ಖಾಯಂ ಸಂಯೋಜನೆ ಇತ್ಯಾದಿಗಳ ಬಗ್ಗೆ ಆನ್ ಲೈನ್ ಮುಖಾಂತರ ಪರಿಗಣಿಸುವ ಬಗ್ಗೆ.

**ಓದಲಾಗಿದೆ** :
1. ಸರ್ಕಾರದ ಆದೇಶ ಸಂಖ್ಯೆ: ಇಡಿ 34 ಇಜಿಬಿಪಿ 2020 (ಭಾಗ-2), ಬೆಂಗಳೂರು, ದಿನಾಂಕ: 20.06.2020.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 29 ಯುಎನ್ಇ 2021, ಬೆಂಗಳೂರು, ದಿ: 12.02.2021 & ತಿದ್ದುಪಡಿ ದಿ: 16.02.2021.
3. ಉಪಾಧ್ಯಕ್ಷರು, ಉನ್ನತ ಶಿಕ್ಷಣ ಪರಿಷತ್ ರವರ ಪತ್ರ ದಿ: 31.05.2021.

*********

**ಪ್ರಸ್ತಾವನೆ:**

ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಕಾಲೇಜುಗಳಿಗೆ ಸಂಯೋಜನೆ, ಹೊಸ ಕೋರ್ಸ್ ಪ್ರಾರಂಭ, ಸಂಯೋಜನೆ ಮುಂದುವರಿಕೆ, ಖಾಯಂ ಸಂಯೋಜನೆ ನೀಡುವ ಕುರಿತು ಸಂಬಂಧ ಪಟ್ಟ ವಿಶ್ವವಿದ್ಯಾಲಯಗಳು ತಪಾಸಣಾ ಸಮಿತಿಗಳನ್ನು ರಚಿಸಿ (Local Inspection Committee), ಸಂಯೋಜನೆ ಕೋರಿರುವ ಕಾಲೇಜುಗಳ ಮೂಲಭೂತ ಸೌಕರ್ಯ, ಸಿಬ್ಬಂದಿಗಳ ಸೇವಾ ವಿವರ, ವಿದ್ಯಾರ್ಥಿಗಳ ದಾಖಲಾತಿ ಇನ್ನಿತರೆ ವಿಷಯಗಳ ಬಗ್ಗೆ ಪರಿಶೀಲಿಸಿ, ತಪಾಸಣಾ ಸಮಿತಿಯು ನೀಡುವ ವರದಿಯನ್ನು ವಿಶ್ವವಿದ್ಯಾಲಯಗಳ ಶೈಕ್ಷಣಿಕ ಪರಿಷತ್ ಹಾಗೂ ಸಿಂಡಿಕೇಟ್‌ಗಳಲ್ಲಿ ಚರ್ಚಿಸಿ, ತೀರ್ಮಾನ ಕೈಗೊಂಡ ನಂತರ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗುತ್ತಿತ್ತು.

ಆದರೆ, ಸರ್ಕಾರದ ಹಂತದಲ್ಲಿ ಇಂತಹ ಪ್ರಸ್ತಾವನೆಗಳನ್ನು ಪರಿಶೀಲಿಸುವಾಗ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಸಂಯೋಜನೆ ಕುರಿತ ಅರ್ಜಿ ನಮೂನೆಯಲ್ಲಿ ಏಕರೂಪತೆ ಇಲ್ಲದೆ ಇರುವುದರಿಂದ ಹಾಗೂ ಯಾವುದೇ ಮಾನದಂಡಗಳನ್ನು ಪರಿಗಣಿಸದೇ ಮತ್ತು ಮೂಲಭೂತ ಸೌಕರ್ಯಗಳ ಬಗ್ಗೆ ಗಮನಿಸದೇ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಾಗಿರುವುದಿಲ್ಲ.

ಮೇಲೆ ಓದಲಾದ ಕ್ರಮ ಸಂಖ್ಯೆ: 1ರ ದಿನಾಂಕ:20.06.2020 ರ ಆದೇಶದಲ್ಲಿ, ಎಲ್ಲಾ ವಿಶ್ವವಿದ್ಯಾಲಯಗಳ ಸಂಯೋಜನಾ ಪ್ರಕ್ರಿಯೆಗಳಾದ: 1) Opening New Colleges, 2) Extension of existing Affiliation, 3) Continuation of Affiliation, 4) Permanent Affiliation, 5) Change/ Addition of subject, Division of Faculty, Increase of intake, 6) Change of Name, 7) Closure & withdrawal of a College, 8) Local Inquiry Committee and, 9) Transfer of Management ಮುಂತಾದವುಗಳ ಬಗ್ಗೆ ರಾಜ್ಯಾದ್ಯಂತ ಏಕರೂಪದ ಸಂಯೋಜನಾ ಪ್ರಕ್ರಿಯಗಳನ್ನು ಪಾರದರ್ಶಕವಾಗಿ ನಡೆಸಲು ಉದ್ದೇಶಿಸಿ, 2019-2020ನೇ ಸಾಲಿನಿಂದ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಕಾಲೇಜುಗಳ ಎಲ್ಲಾ ರೀತಿಯ ಸಂಯೋಜನೆಗಳನ್ನು ರಾಷ್ಟ್ರೀಯ ಮಾಹಿತಿ ಸಂಸ್ಥೆ (ಎನ್.ಐ.ಸಿ) ಸಿದ್ಧಪಡಿಸಿರುವ ಆನ್ ಲೈನ್ ತಂತ್ರಾಂಶದ ಮುಖಾಂತರವೇ ನಡೆಸಲು ಆದೇಶಿಸಲಾಗಿತ್ತು.

ಆದರೆ, 2020-21 ನೇ ಸಾಲಿನಲ್ಲಿ ಎನ್‌ಐ.ಸಿ. ಆನ್ ಲೈನ್ ಮೂಲಕ ಸಿದ್ಧಪಡಿಸಲಾದ ಸಂಯೋಜನಾ ಪ್ರಕ್ರಿಯೆಯಲ್ಲಿ ಕೆಲವು ನ್ಯೂನ್ಯತೆ ಹಾಗೂ ಕೋವಿಡ್-19 ಸಾಂಕ್ರಾಮಿಕ ರೋಗ ಪ್ರಾರಂಭಗೊಂಡು ನಿಗಧಿತ ಸಮಯಧಿಯಲ್ಲಿ ಸಂಯೋಜನೆಗಳನ್ನು ನೀಡಲು ಅಡೆತಡೆ ಉಂಟಾದ ಕಾರಣ ಕೆಲವು ಬದಲಾವಣೆಗಳೊಂದಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ: 2ರ ದಿನಾಂಕ:12.02.2021 ರಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ. ಆದರೆ, ಪ್ರಸಕ್ತ ಸಾಲಿನಲ್ಲಿಯೂ ಸಹ ಕೋವಿಡ್-19 2ನೇ ಅಲೆ ಪ್ರಾರಂಭಗೊಂಡಿರುವುದರಿಂದ ಪ್ರಸ್ತುತ ರಾಜ್ಯದಲ್ಲಿ ಲಾಕ್‌ಡೌನ್ ಇರುವ ಕಾರಣ ಆನ್‌ಲೈನ್ ಅಫಿಲಿಯೇಶನ್ ಮೂಲಕ ಸಿದ್ಧಪಡಿಸಲು ಕೆಲವು ತಾಂತ್ರಿಕ ಅಡೆತಡೆಗಳು ಉಂಟಾಗಿರುವ ಕಾರಣ, ಈ ಸಂಬಂಧ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರು ಮೇಲೆ ಓದಲಾದ ಕ್ರಮ ಸಂಖ್ಯೆ: (3), ದಿನಾಂಕ:31.05.2021 ರ ಪತ್ರದಲ್ಲಿ ರಾಷ್ಟ್ರೀಯ ಮಾಹಿತಿ ಸಂಸ್ಥೆ (ಎನ್‌ಐಸಿ) ರವರು ಸಿದ್ಧಪಡಿಸಿರುವ 2021-22ನೇ ಸಾಲಿನ ಆನ್‌ಲೈನ್ ಅಫೀಲಿಯೇಶನ್ ನಲ್ಲಿ ಕೆಲವು ಬದಲಾವಣೆಗಳೊಂಗಿಗೆ ಮಾರ್ಪಾಡು ಮಾಡಿ, ಉನ್ನತ ಶಿಕ್ಷಣ ಇಲಾಖೆಯು ನಿರ್ವಹಿಸುತ್ತಿರುವ ತಂತ್ರಾಂಶದಲ್ಲಿ ಅಳವಡಿಸುವಂತೆ ನೀಡಿರುವ ಸಲಹೆಗಳನ್ನು ಪರಿಗಣಿಸಿ ಈ ಕೆಳಕಂಡ ಆದೇಶ.

<u>ಸರ್ಕಾರಿ ಆದೇಶ ಸಂಖ್ಯೆ: ಇಡಿ 34 ಇಜಿಒವಿ 2020 (ಭಾಗ-2), ಬೆಂಗಳೂರು, ದಿನಾಂಕ: 10.06.2021</u>

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು, ಕೂಲಂಕಷವಾಗಿ ಪರಿಶೀಲಿಸಿ, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳಿಗೆ 2020-21 ಹಾಗೂ 2021-22ನೇ ಸಾಲಿನ ಸಂಯೋಜನೆ ಪ್ರಕ್ರಿಯೆ ಅಂದರೆ, Opening New Colleges, Extension of existing Affiliation, Continuation of Affiliation, Permanent Affiliation, Change/ Addition of subject, Division of Faculty, Increase of intake, Change of name, Closure & withdrawal of a College, Local Inquiry Committee formation and Transfer of Management ಮುಂತಾದ ಕಾರ್ಯಚಟುವಟಿಕೆಗಳಿಗೆ ಅನುಮೋದನೆ ನೀಡುವುದು ಸೇರಿದಂತೆ ಹಾಗೂ ಮುಂಬರುವ ಶೈಕ್ಷಣಿಕ ವರ್ಷಗಳಲ್ಲಿ ಕಡ್ಡಾಯವಾಗಿ ರಾಷ್ಟ್ರೀಯ ಮಾಹಿತಿ ಸಂಸ್ಥೆ (ಎನ್.ಐ.ಸಿ) ಮುಖಾಂತರ ಉನ್ನತೀಕರಿಸಿ, ಆನ್-ಲೈನ್ ಸಂಯೋಜನಾ ತಂತ್ರಾಂಶದ ಮುಖಾಂತರವೇ ಅರ್ಜಿಗಳನ್ನು ಆಹ್ವಾನಿಸಿ, ಈ ಕೆಳಕಂಡ ಬದಲಾವಣೆಗಳೊಂದಿಗೆ ವಿಶ್ವವಿದ್ಯಾಲಯಗಳು ಸ್ಥಳೀಯ ವಿಚಾರಣಾ ಸಮಿತಿಯ ವರದಿಯೊಂದಿಗೆ, ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಆದೇಶಿಸಿದೆ.

1. ಪ್ರಸಕ್ತ 2021-22ನೇ ಸಾಲಿಗೆ ವಿಶ್ವವಿದ್ಯಾಲಯಗಳು ಈಗಾಗಲೇ ಸಂಯೋಜನೆಗೆ ಸಂಬಂದಿಸಿ ಅರ್ಜಿಗಳನ್ನು ಕಾಲೇಜುಗಳಿಂದ ಆನ್‌ಲೈನ್ ಮುಖಾಂತರ ಸ್ವೀಕರಿಸದೇ ಇದ್ದಲ್ಲಿ, ಕೂಡಲೇ ಆನ್‌ಲೈನ್ ಮುಖಾಂತರ ಅರ್ಜಿ ಕರೆದು ಸಂಯೋಜನಾ ಪ್ರಕ್ರಿಯೆಯನ್ನು ಪ್ರಾರಂಭಿಸುವುದು.
2. ಆಯಾಯ ವಿಶ್ವವಿದ್ಯಾಲಯಗಳಿಂದ ರಚಿಸಲ್ಪಟ್ಟಿರುವ ಸ್ಥಳೀಯ ಪರಿಶೀಲನಾ ಸಮಿತಿಗಳು ಅರ್ಜಿಗಳನ್ನು ಪರಿಶೀಲಿಸುವುದು, ಒಂದು ವೇಳೆ ಕೋವಿಡ್-19 ಸಾಂಕ್ರಾಮಿಕ ರೋಗದ ಹರಡುವಿಕೆ ಸುದಾರಿಸಲ್ಪಟ್ಟು, ಲಾಕ್‌ಡೌನ್ ತೆರವಾದಲ್ಲಿ, ಸ್ಥಳೀಯ ಪರಿಶೀಲನಾ ಸಮಿತಿಗಳು ಕಾಲೇಜುಗಳ ಭೌತಿಕ ಪರಿಶೀಲನೆಯನ್ನು ಮಾಡುವುದು. ಇಲ್ಲವಾದಲ್ಲಿ Renewal/ Extension/ Continuation of affiliation ಪ್ರಕರಣಗಳಲ್ಲಿ

ಪ್ರಸಕ್ತ ಮಂಜೂರಾಗಿರುವ ಕೋರ್ಸ್ ಮತ್ತು ಪ್ರವೇಶಾತಿ ಸಂಖ್ಯೆಗೆ ಸ್ಥಳೀಯ ಪರಿಶೀಲನಾ ಸಮಿತಿಗಳು ಕಾಲೇಜುಗಳನ್ನು virtual ಆಗಿ ಪರಿಶೀಲಿಸಿ, ಆಯಾಯ ವಿಶ್ವವಿದ್ಯಾಲಯಗಳಿಗೆ ವರದಿಯನ್ನು ನೀಡುವುದು.

3. ಪ್ರಸಕ್ತ 2021-22ನೇ ಸಾಲಿಗೆ Renewal/ Extension/ Continuation of affiliation ಪ್ರಕರಣಗಳಲ್ಲಿ ಪ್ರಸಕ್ತ ಮಂಜೂರಾಗಿರುವ ಕೋರ್ಸ್ ಮತ್ತು ಪ್ರವೇಶಾತಿ ಸಂಖ್ಯೆಗೆ ಮಂಜೂರಾತಿ ನೀಡುವ ಬಗ್ಗೆ ಆಯಾ ವಿಶ್ವವಿದ್ಯಾಲಯಗಳೇ ಸೂಕ್ತ ನಿರ್ಣಯ ಕೈಗೊಳ್ಳುವುದು.

4. ಒಂದು ವೇಳೆ ಕೋವಿಡ್-19 ಸಾಂಕ್ರಾಮಿಕ ರೋಗದ ಹರಡುವಿಕೆ ಹಾಗೂ ಲಾಕ್‌ಡೌನ್ ಮುಂದುವರೆದಲ್ಲಿ, ಪ್ರಸಕ್ತ ಮಂಜೂರಾಗಿರುವ ಕೋರ್ಸ್‌ಗಳಿಗೆ ಹೆಚ್ಚುವರಿ ಪ್ರವೇಶಾತಿ ಸಂಖ್ಯೆ/ಹೆಚ್ಚುವರಿ ವಿಭಾಗಗಳ ಕೋರಿಕೆ ಇದ್ದಲ್ಲಿ, ಅವುಗಳನ್ನು Virtual Meeting ಮೂಲಕ ಪರಿಶೀಲನೆ ಮಾಡಿ ಆಯಾಯ ವಿಶ್ವವಿದ್ಯಾಲಯಗಳಿಗೆ ವರದಿ ನೀಡಲು ಸ್ಥಳೀಯ ಪರಿಶೀಲನಾ ಸಮಿತಿಗಳಿಗೆ ಅವಕಾಶ ಕಲ್ಪಿಸಬಹುದು.

5. ಆದರೆ, ಹೊಸ ಕಾಲೇಜುಗಳ ಪ್ರಾರಂಭ/ ಹೊಸ ಕೋರ್ಸ್‌ಗಳು/ಹೆಚ್ಚುವರಿ ಕಾಂಬಿನೇಶನ್ ಮತ್ತು ಹೊಸದಾಗಿ ಖಾಯಂ ಸಂಯೋಜನೆ, ಮುಂತಾದ ಬೇಡಿಕೆಗಳ ಪ್ರಕರಣಗಳಲ್ಲಿ ಸ್ಥಳೀಯ ಪರಿಶೀಲನಾ ಸಮಿತಿಗಳು ಖುದ್ದಾಗಿ ಕಾಲೇಜುಗಳನ್ನು ಬೇಟಿಯಾಗಿ ಪರಿಶೀಲಿಸಿ ವರದಿಗಳನ್ನು ಸಲ್ಲಿಸುವುದು.

6. ವಿಶ್ವವಿದ್ಯಾಲಯಗಳು ತ್ವರಿತವಾಗಿ ಸ್ಥಳೀಯ ಪರಿಶೀಲನಾ ಸಮಿತಿಗಳ ವರದಿಗಳನ್ನು ಪರಿಶೀಲಿಸಿ, ವಿಶ್ವವಿದ್ಯಾಲಯಗಳ ಶಿಫಾರಸ್ಸಿನೊಂದಿಗೆ ಸರ್ಕಾರದ ಅನುಮೋದನೆಗೆ ಶೀಘ್ರವಾಗಿ ಕಳುಹಿಸಿ ಕೊಡುವುದು.

7. ಸರ್ಕಾರದ ಆದೇಶ ಸಂಖ್ಯೆ: ಇಡಿ/29/ಯುಎನ್‌ಇ/2021, ದಿನಾಂಕ: 12.02.2021 ಹಾಗೂ ತಿದ್ದುಪಡಿ ಆದೇಶ ದಿನಾಂಕ: 16.02.2021ರ ಮಾರ್ಗಸೂಚಿಗಳನ್ನು ಎನ್‌ಐಸಿ ತಂತ್ರಾಂಶದಲ್ಲಿ ಅಳವಡಿಸುವುದು ಹಾಗೂ ಇದನ್ನು ಸ್ಥಳೀಯ ವಿಚಾರಣಾ ಸಮಿತಿಗಳು ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶೀತಲ್ ಎಂ ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿಗಳು
(ವಿಶ್ವವಿದ್ಯಾಲಯ-1), ಉನ್ನತ ಶಿಕ್ಷಣ ಇಲಾಖೆ.

ಪ್ರತಿಯನ್ನು:

1. ಉಪಾಧ್ಯಕ್ಷರು, ಕರ್ನಾಟಕ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.
2. ಕುಲಪತಿಗಳು, ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
3. ಕುಲಸಚಿವರುಗಳು, ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001.

4...

5. ನಿರ್ದೇಶಕರು. ತಾಂತ್ರಿಕ ಶಿಕ್ಷಣ ಇಲಾಖೆ. ಅರಮನೆ ರಸ್ತೆ, ಬೆಂಗಳೂರು-560 001.

6. ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.

7. ಗೌರವಾನ್ವಿತ ರಾಜ್ಯಪಾಲರ ಆಪ್ತ ಕಾರ್ಯದರ್ಶಿಗಳು. ಕರ್ನಾಟಕ ಸರ್ಕಾರ.

8. ಕಾರ್ಯದರ್ಶಿಗಳು. ಮಾನ್ಯ ಉಪಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ ಸಚಿವರು. ಕರ್ನಾಟಕ ಸರ್ಕಾರ.

9. ಉಪ ಮುಖ್ಯಮಂತ್ರಿಗಳು. ಉನ್ನತ ಶಿಕ್ಷಣ ಇಲಾಖೆರವರ ಆಪ್ತ ಕಾರ್ಯದರ್ಶಿಗಳು. ಕರ್ನಾಟಕ ಸರ್ಕಾರ.

10. ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ. ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

11. ಉಪ ಕಾರ್ಯದರ್ಶಿಗಳು (ವಿಶ್ವವಿದ್ಯಾಲಯ). ಉನ್ನತ ಶಿಕ್ಷಣ ಇಲಾಖೆ. ಬೆಂಗಳೂರು.

12. ಉಪ ಕಾರ್ಯದರ್ಶಿಗಳು (ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ). ಉನ್ನತ ಶಿಕ್ಷಣ ಇಲಾಖೆ. ಬೆಂಗಳೂರು.

13. ಉಪ ಕಾರ್ಯದರ್ಶಿಗಳು (ಯೋಜನೆ). ಉನ್ನತ ಶಿಕ್ಷಣ ಇಲಾಖೆ. ಬೆಂಗಳೂರು.

14. ವಿಶೇಷಾಧಿಕಾರಿಗಳು. ಇ-ಆಡಳಿತ ಘಟಕ. ಉನ್ನತ ಶಿಕ್ಷಣ ಇಲಾಖೆ. ಬೆಂಗಳೂರು.

15. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

MANGALORE UNIVERSITY
0 1 . . 2020

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 218 ಯುಎನ್ಇ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 24.08.2020.

## ಸುತ್ತೋಲೆ

ಖಾಸಗಿ ಪ್ರಾಥಮಿಕ ಶಾಲಾ ಶಿಕ್ಷಣ ಸಂಸ್ಥೆಗಳಲ್ಲಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವ ಸಂಬಂಧ ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಪಿಟಿಶನ್ ಸಂಖ್ಯೆ: 483/2004, ದಿನಾಂಕ:13.04.2009ರ ತೀರ್ಪಿನನ್ವಯ ಹೊಸ ಖಾಸಗಿ ಶಾಲೆಗಳಿಗೆ ನೋಂದಣಿ, ಮಾನ್ಯತೆ, ಮಾನ್ಯತೆ ನವೀಕರಣ ಮತ್ತು ಸಂಯೋಜನೆ ನೀಡುವ ಪೂರ್ವದಲ್ಲಿ ಶಾಲಾ ಆಡಳಿತ ಮಂಡಳಿಗಳಿಂದ ಶಾಲಾ ಕಟ್ಟಡವನ್ನು ಭಾರತದ ರಾಷ್ಟ್ರೀಯ ಕಟ್ಟಡ ಸಂಹಿತೆಯಲ್ಲಿನ NBC (National Building Code) ನಿಯಮಾವಳಿಯನ್ವಯ ಕಟ್ಟಡದ ಸುರಕ್ಷತೆ ಕುರಿತು ಸಕ್ಷಮ ಪ್ರಾಧಿಕಾರದಿಂದ ಪಡೆದ ದೃಢೀಕರಣ ಹಾಗೂ ಅಗ್ನಿನಂದಕ ಉಪಕರಣಗಳನ್ನು ಅಳವಡಿಸಿ, ತುರ್ತು ಪರಿಸ್ಥಿತಿಯಲ್ಲಿ ಸದರಿ ಉಪಕರಣದ ಬಳಕೆ ಕುರಿತು ತರಬೇತಿ ಪಡೆದಿರುವ ಬಗ್ಗೆ ದೃಢೀಕರಣ ಮತ್ತು ಶಾಲೆಯ ಆವರಣವು ಎಲ್ಲಾ ರೀತಿಯ ಅಗ್ನಿ ದುರಂತಗಳಿಂದ ಹಾಗೂ ವಿಷಯುಕ್ತ ಪದಾರ್ಥಗಳಿಂದ ಮುಕ್ತಿ ಹೊಂದಿರುವ ಬಗ್ಗೆ ದೃಢೀಕರಿಸುವುದು ಎಂದು ನಿರ್ದೇಶನವನ್ನು ನೀಡಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಹಾಗೂ ಸರ್ಕಾರದ ಮಾರ್ಗಸೂಚಿಯಂತೆ, ಇನ್ನು ಮುಂದೆ ಖಾಸಗಿ/ಸರ್ಕಾರಿ ಕಾಲೇಜು ಕಟ್ಟಡಗಳು ಸದೃಢತೆ/ಸುರಕ್ಷತೆ ಕುರಿತು National Building Code-2016 ರ ನಿಯಮಾನುಸಾರ ಹಾಗೂ Fire Services Department ನಿಂದ (Compliance certificate) ದೃಢೀಕರಣ ಪತ್ರಗಳನ್ನು ಪಡೆಯುವುದು ಕಡ್ಡಾಯವಾಗಿರುವುದರಿಂದ, ಈ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಲೋಕೋಪಯೋಗಿ ಇಲಾಖೆ ಪರಿವೀಕ್ಷಣೆ ನಡೆಸಿ ಖಚಿತಪಡಿಸಿಕೊಳ್ಳತಕ್ಕದ್ದು.

ಹೊಸ ಕಾಲೇಜು ಸ್ಥಾಪಿಸಲು ಉದ್ದೇಶಿಸಿ, ಸಂಯೋಜನೆ ಕೋರಿ ಸಲ್ಲಿಸಲಾಗುವ ಅರ್ಜಿಗಳನ್ನು ವಿಶ್ವವಿದ್ಯಾಲಯಗಳು ಸ್ವೀಕರಿಸಿದ ನಂತರ, NBC (National Building Code) ನಿಯಮಾವಳಿಯನ್ವಯ ಕಟ್ಟಡದ ಸುರಕ್ಷತೆಯ ಕುರಿತು ಲೋಕೋಪಯೋಗಿ ಇಲಾಖೆ ಮತ್ತು Fire Services Department ನಿಂದ Compliance Certificates ಗಳನ್ನು ಪಡೆದಿರುವುದನ್ನು ಖಚಿತಪಡಿಸಿಕೊಂಡು ಸೂಕ್ತ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು. ಸಂಯೋಜನಾ

ಅರ್ಜಿಯೊಂದಿಗೆ ಮೇಲ್ಕಂಡ ಸುರಕ್ಷತಾ ಪ್ರಮಾಣ ಪತ್ರಗಳ ಸಲ್ಲಿಕೆಯನ್ನು ವಿಶ್ವವಿದ್ಯಾಲಯಗಳು ಅಗತ್ಯಪಡಿಸತಕ್ಕದ್ದು. ಕಟ್ಟಡ ಸುರಕ್ಷತಾ ಪ್ರಮಾಣ ಪತ್ರಗಳ ರಹಿತವಾಗಿ ಸಲ್ಲಿಸಲಾಗುವ ಹೊಸ ಸಂಯೋಜನಾ ಅರ್ಜಿಗಳನ್ನು ವಿಶ್ವವಿದ್ಯಾಲಯಗಳು ಪರಿಗಣಿಸತಕ್ಕದ್ದಲ್ಲ. ಲೀಸ್ ಮೇಲೆ ಪಡೆದ ಕಟ್ಟಡಗಳಿಗೂ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಕಾಲೇಜುಗಳು ಸ್ಥಳಾಂತರಗೊಳ್ಳಲು ಉದ್ದೇಶಿಸಿರುವ ಕಟ್ಟಡಗಳಿಗೂ ಈ ನಿಬಂಧನೆಯು ಅನ್ವಯಿಸುತ್ತದೆ.

National Building Code of India ದ ಸುರಕ್ಷಾ ಹಾಗೂ Fire safety ಮಾನದಂಡಗಳನ್ನು ಪಾಲಿಸದಿರುವುದು ಕಂಡುಬಂದಲ್ಲಿ, ಸಂಬಂಧಿಸಿದವರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

(ಶೀತಲ್ ಎಂ. ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ-1)

ಗೆ:

1. ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, 3ನೇ ಮಹಡಿ, ವಿಕಾಸ ಸೌಧ, ಬೆಂಗಳೂರು.
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು.
4. ಮುಖ್ಯ ಇಂಜಿನಿಯರ್, (ಸಂಪರ್ಕ ಮತ್ತು ಕಟ್ಟಡಗಳು) ದಕ್ಷಿಣ, ಬೆಂಗಳೂರು.
5. ಮುಖ್ಯ ಇಂಜಿನಿಯರ್, (ಸಂಪರ್ಕ ಮತ್ತು ಕಟ್ಟಡಗಳು) ಉತ್ತರ, ಧಾರವಾಡ
6. ಮುಖ್ಯ ಇಂಜಿನಿಯರ್, (ಸಂಪರ್ಕ ಮತ್ತು ಕಟ್ಟಡಗಳು) ಈಶಾನ್ಯ, ಕಲ್ಬುರ್ಗಿ.
7. ಗೌರವಾನ್ವಿತ ರಾಜ್ಯಪಾಲರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ.
8. ವಿಶೇಷಾಧಿಕಾರಿಗಳು, ಇ-ಆಡಳಿತ ಘಟಕ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು
9. ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು-560056.
10. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-570005

11. ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ-580033.
12. ಕುಲಸಚಿವರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ-577451.
13. ಕುಲಸಚಿವರು, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಕಲಬುರಗಿ-585106.
14. ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು-574199.
15. ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು-572101.
16. ಕುಲಸಚಿವರು, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ - 583276.
17. ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
18. ಕುಲಸಚಿವರು, ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ, ಬೆಳಗಾವಿ.
19. ಕುಲಸಚಿವರು, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾನಿಲಯ, ಬಳ್ಳಾರಿ.
20. ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ, ಬೆಳಗಾವಿ.
21. ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು-570006.
22. ಕುಲಸಚಿವರು, ಕರ್ನಾಟಕ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ-586101.
23. ಕುಲಸಚಿವರು, ಕರ್ನಾಟಕ ರಾಜ್ಯ ಸಂಸ್ಕೃತ ವಿಶ್ವವಿದ್ಯಾನಿಲಯ, ಚಾಮರಾಜಪೇಟೆ, ಬೆಂಗಳೂರು.
24. ಕುಲಸಚಿವರು, ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಗೊಟಗೋಡಿ, ಶಿಗ್ಗಾವಿ ತಾಲ್ಲೂಕು, ಹಾವೇರಿ ಜಿಲ್ಲೆ.
25. ಕುಲಸಚಿವರು, ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ, ಮೈಸೂರು.
26. ಕುಲಸಚಿವರು ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಶ್ರೀ ದೇವರಾಜ ಅರಸು ಬಡಾವಣೆ ಕೋಲಾರ.
27. ಕುಲಸಚಿವರು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ಸೆಂಟ್ರಲ್ ಕಾಲೇಜು ಆವರಣ ಬೆಂಗಳೂರು.
28. ಎಲ್ಲಾ ಖಾಸಗಿ ವಿಶ್ವವಿದ್ಯಾನಿಲಯಗಳ ಕುಲಪತಿಗಳು- ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು, ಇವರ ಮೂಲಕ.

ಕರ್ನಾಟಕ ಸರ್ಕಾರ

ಇ-ಕಚೇರಿ ಸಂ: ಇಡಿ 143 ಯುಬಿವಿ 2020

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳಕಟ್ಟಡ
ಬೆಂಗಳೂರು, ದಿನಾಂಕ:22.10.2020

ಇಂದ:

"ನೋಂದಾಯಿತ ಅಂಚೆ ಮೂಲಕ"

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ,
ಬೆಂಗಳೂರು.

ಇವರಿಗೆ:

1. ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560 056
2. ಕುಲಸಚಿವರು, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಬೆಂಗಳೂರು
3. ಕುಲಸಚಿವರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ.
4. ಕುಲಸಚಿವರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
5. ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
6. ಕುಲಸಚಿವರು, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.
7. ಕುಲಸಚಿವರು, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.
8. ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9. ಕುಲಸಚಿವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
10. ಕುಲಸಚಿವರು, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ.
11. ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ.
12. ಕುಲಸಚಿವರು, ತುಮಕೂರು ವಿಶ್ವವಿದ್ಯಾಲಯ, ತುಮಕೂರು.
13. ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
14. ಕುಲಸಚಿವರು, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.

ಮಾನ್ಯರೇ,

ವಿಷಯ: 2020-21ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಪ್ರಕ್ರಿಯೆಗಳ ಬಗ್ಗೆ

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, [illegible] [illegible] [illegible] ಉದ್ದೇಶದಿಂದ ಸಂಯೋಜನೆ ಪ್ರಕ್ರಿಯೆಗಳನ್ನು ಪಾರದರ್ಶಕ ಹಾಗೂ ಸಮಗ್ರಗೊಳಿಸುವುದಕ್ಕಾಗಿ ಆನ್‌ಲೈನ್ ವ್ಯವಸ್ಥೆಯನ್ನು ಜಾರಿಗೊಳಿಸಿ ಈ ನಿಟ್ಟಿನಲ್ಲಿ ಸರ್ಕಾರದಿಂದ ಸೂಚನೆಗಳನ್ನು ನೀಡಲಾಗಿರುವ ಹಾಗೂ ಕೋವಿಡ್-19ರ ಪ್ರಸ್ತುತ [illegible] [illegible] [illegible] [illegible] ಅಗತ್ಯತೆಯ ಬಗ್ಗೆ ಗಮನ ಸೆಳೆಯಲಾಗಿದೆ.

ಈಗಾಗಲೇ ಆನ್‌ಲೈನ್‌ನಲ್ಲಿ ಸ್ವೀಕರಿಸಿರುವ ಅರ್ಜಿಗಳನ್ನು ಪರಿಶೀಲಿಸಿ ಸರ್ಕಾರದ ಸೂಚನೆಗಳನ್ವಯ ನಿಯಮಾನುಸಾರ ಕ್ರಮಕೈಗೊಂಡು ಎಲ್ಲ ಅವಶ್ಯಕ ಶೈಕ್ಷಣಿಕ, ಭೌತಿಕ ಹಾಗೂ ನಾಗರೀಕ ಮೂಲಸೌಲಭ್ಯಗಳನ್ನು ಅರ್ಜಿದಾರ ಶಿಕ್ಷಣ ಸಂಸ್ಥೆಯು ಹೊಂದಿರುವುದನ್ನು ಖಚಿತಪಡಿಸಿಕೊಂಡ ತರುವಾಯದಲ್ಲಿ ಅಂತಹ ಹೊಸ ಕಾಲೇಜು ಮತ್ತು ಸಂಯೋಜನಾ ಮಂಜೂರಾತಿ ಹಾಗೂ ನವೀಕರಣಗಳಿಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 59(10)ರಡಿ ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಆನ್‌ಲೈನ್ ವ್ಯವಸ್ಥೆಯ ಮೂಲಕ ಸಂಪೂರ್ಣ ದಾಖಲೆಗಳೊಂದಿಗೆ ಸಲ್ಲಿಸಲು ತಿಳಿಸಲಾಗಿದೆ.

ಯಾವುದೇ ಕಾಲೇಜಿನಲ್ಲಿ ಅವಶ್ಯಕ ಶೈಕ್ಷಣಿಕ, ಭೌತಿಕ ಹಾಗೂ ನಾಗರೀಕ ಮೂಲ ಸೌಲಭ್ಯಗಳನ್ನು ಹೊಂದಿರದ ಕಾಲೇಜು ಸ್ಥಳ ಪರಿಶೀಲನೆಯನ್ನು ನಡೆಸದ ಕಾಲೇಜುಗಳ ಸಂಯೋಜನೆಗೆ ಶಿಫಾರಸ್ಸು ಮಾಡತಕ್ಕದ್ದಲ್ಲ. ಸಂಯೋಜನೆ ಸಂಬಂಧಿತ ದಾಖಲೆಗಳು ಹಾಗೂ ಮಾಹಿತಿ ಸಮರ್ಪಕವಾಗಿರುವ ಬಗ್ಗೆ ಆಯಾ ಕುಲಪತಿಗಳು ಮತ್ತು ಕುಲಸಚಿವರು ಕಡ್ಡಾಯವಾಗಿ ದೃಢೀಕರಣ ನೀಡತಕ್ಕದ್ದು. ಒಂದುವೇಳೆ ಲೋಪ/ಪ್ರಮಾದ ಉಂಟಾದಲ್ಲಿ ಸಂಬಂಧಿಸಿದ ಕುಲಪತಿ/ಕುಲಸಚಿವರುಗಳನ್ನು ನೇರವಾಗಿ ಹೊಣೆಗಾರರನ್ನಾಗಿ ಮಾಡಲಾಗುವುದು.

ಮುಂದುವರೆದು, ಹೊಸದಾಗಿ ಆರಂಭಿಸಲು ಉದ್ದೇಶಿಸಲಾಗುವ ಕಾಲೇಜುಗಳ ಕಟ್ಟಡಗಳು National Building Cod(NBC) ನಿಯಮಗಳು/ಮಾನ ದಂಡಗಳನ್ವಯ ನಿರ್ಮಿತವಾಗಿರುವ ಕುರಿತು ಲೋಕೋಪಯೋಗಿ ಇಲಾಖೆ ಹಾಗೂ ಅಗ್ನಿಶಾಮಕ ಸೇವೆಗಳ ಇಲಾಖೆಗಳಿಂದ ದೃಢೀಕರಣ ಪತ್ರಗಳನ್ನು ಪಡೆದಿರುವ ಬಗ್ಗೆ ದೃಢಪಡಿಸಿಕೊಂಡ ನಂತರವೇ ಹೊಸಕಾಲೇಜು ಸಂಯೋಜನೆ ಪ್ರಸ್ತಾವನೆಗಳನ್ನು ಪರಿಗಣಿಸಲು ಸರ್ಕಾರದ ಪತ್ರಸಂಖ್ಯೆ : ಇಡಿ 218 ಯುಎನ್ಇ 2020, ದಿನಾಂಕ: 24.08.2020ರಲ್ಲಿ ಸೂಚನೆಗಳನ್ನು ನೀಡಲಾಗಿದೆ. ಆದರೆ, ಕೆಲವು ವಿಶ್ವವಿದ್ಯಾಲಯಗಳು ಸದರಿ ದೃಢೀಕರಣ ಪ್ರಮಾಣಪತ್ರಗಳ ರಹಿತವಾಗಿ ಹೊಸಕಾಲೇಜು ಸಂಯೋಜನೆ ಪ್ರಸ್ತಾವನೆಗಳನ್ನು ಪರಿಗಣಿಸಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಆದುದರಿಂದ, ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪಿನನ್ವಯ ಸರ್ಕಾರದ ಪತ್ರ ಸಂಖ್ಯೆ: ಇಡಿ 218 ಯುಎನ್ಇ 2020 ದಿನಾಂಕ: 24.08.2020ರಲ್ಲಿ ನೀಡಲಾಗಿರುವ ಸೂಚನೆಗಳನ್ನು ಅನುಸರಿಸಿ National Building Co(NBC) ನಿಯಮಗಳು/ಮಾನದಂಡಗಳನ್ವಯ ಕಟ್ಟಡ ಕುರಿತಂತೆ ಲೋಕೋಪಯೋಗಿ ಇಲಾಖೆ ಹಾಗೂ ಅಗ್ನಿಶಾಮಕ ಸೇವೆಗಳ ಇಲಾಖೆಗಳಿಂದ ದೃಢೀಕರಣ ಪತ್ರಗಳನ್ನು ಪಡೆದಿರದ ಹೊಸ ಕಾಲೇಜು ಸಂಯೋಜನೆ ಅರ್ಜಿಗಳನ್ನು ತಿರಸ್ಕರಿಸುವಂತೆ ಸೂಚಿಸಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮನಂಬುಗೆಯ

Hall

(ಮಹೇಶ್ ಆರ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು-2)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡಗಳ ಆಡಳಿತ ಮಂಡಳಿಗಳು ನಡೆಸುವ ಕಾಲೇಜುಗಳ ಸಂಯೋಜನಾ ಶುಲ್ಕದಲ್ಲಿ ರಿಯಾಯಿತಿ ಬಗ್ಗೆ ಆದೇಶ.

ಓದಲಾದ: (1) ದಿನಾಂಕ: 17-07-1996 ಸಂಖ್ಯೆ: ಇಡಿ 33 ಯುಆರ್‌ಸಿ 96ರ ಸರ್ಕಾರಿ ಪತ್ರ.

(2) ದಿನಾಂಕ: 02-08-1996 ಇಡಿ 80 ಯುಎಸ್‌ವಿ 96ರ ಸರ್ಕಾರಿ ಪತ್ರ.

****

ಪೀಠಿಕೆ:-

1) ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡಗಳ ಆಡಳಿತ ಮಂಡಳಿಗಳು ನಡೆಸುವ ಕಾಲೇಜುಗಳ ಸಂಯೋಜನಾ ಶುಲ್ಕದಲ್ಲಿ ಶೇ. 50 ರಷ್ಟು ರಿಯಾಯಿತಿಯನ್ನು ನೀಡುವ ವಿಚಾರವನ್ನು ದಿನಾಂಕ: 22-06-1996ರಂದು ಜರುಗಿದ ಅಂತರ ವಿಶ್ವವಿದ್ಯಾಲಯ ಮಂಡಳಿಯ ಸಭೆಯಲ್ಲಿ ಚರ್ಚಿಸಲಾಗಿತ್ತು. ಸದರಿ ಅಂತರ ವಿಶ್ವವಿದ್ಯಾಲಯ ಮಂಡಳಿಯ ಸಭೆಯ ನಡವಳಿಯ ಶಿಫಾರಸ್ಸು ಸಂಖ್ಯೆ:15:96ರಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಗಳ ಆಡಳಿತ ಮಂಡಳಿಗಳ ಕಾಲೇಜುಗಳಿಂದ ವಸೂಲಾತಿ ಮಾಡುವ ಸಂಯೋಜನಾ ಶುಲ್ಕದಲ್ಲಿ ಶೇ. 50ರಷ್ಟು ರಿಯಾಯಿತಿ ನೀಡಬಹುದೆಂದು ನಿರ್ಧರಿಸಲಾಗಿದೆ. ಈ ನಿರ್ಣಯವನ್ನು ಶೀಘ್ರವಾಗಿ ಅನುಷ್ಠಾನಗೊಳಿಸುವಂತೆ ದಿನಾಂಕ: 02-08-1996 ಸಂಖ್ಯೆ: ಇಡಿ 80 ಯುಎಸ್‌ವಿ 96ರ ಸರ್ಕಾರಿ ಪತ್ರದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಸೂಚಿಸಲಾಗಿತ್ತು.

2) ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡಗಳ ಆಡಳಿತ ಮಂಡಳಿಗಳು ನಡೆಸುವ ಕಾಲೇಜುಗಳ ಸಂಯೋಜನಾ ಶುಲ್ಕದಲ್ಲಿ ಶೇ. 50 ರಷ್ಟು ರಿಯಾಯಿತಿ ನೀಡುವುದಕ್ಕೆ ಸಂಬಂಧಿಸಿದ ಅಂತರ ವಿಶ್ವವಿದ್ಯಾಲಯ ಮಂಡಳಿಯ ಈ ನಿರ್ಣಯವನ್ನು ಕೆಲವು ವಿಶ್ವವಿದ್ಯಾಲಯಗಳು ಮಾತ್ರ ಕಾರ್ಯಗತಗೊಳಿಸಿದ್ದು ಇನ್ನೂ ಕೆಲವು ವಿಶ್ವವಿದ್ಯಾಲಯಗಳು ಕಾರ್ಯಗತಗೊಳಿಸಬೇಕಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯ ಕೆಲವು ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡಗಳ ಆಡಳಿತ ಮಂಡಳಿಗಳು ಸಂಯೋಜನಾ ಶುಲ್ಕದಲ್ಲಿ ಶೇ. 50ರಷ್ಟು ರಿಯಾಯಿತಿ ನೀಡುವ ಈ ನಿರ್ಣಯವನ್ನು ಕ್ರಿಯಾತ್ಮಕವಾಗಿ ಕಾರ್ಯಗತಗೊಳಿಸುವಂತೆ ಒತ್ತಾಯಿಸಿವೆ.

3) ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡಗಳ ನಡೆಸುವ ಕಾಲೇಜುಗಳ ಸಂಯೋಜನಾ ಶುಲ್ಕದಲ್ಲಿ ರಿಯಾಯಿತಿ ನೀಡುವ ಕ್ರಮವು ಒಂದು ಉತ್ತಮ ಯೋಜನೆಯಾಗಿದ್ದು ಈ ನಿರ್ಣಯವನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಸರ್ಕಾರವು ನಿರ್ಣಯಿಸಿದೆ. ಆದ್ದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 21 ಯುಬಿವಿ 2004, ಬೆಂಗಳೂರು
ದಿನಾಂಕ:15-05-2004

4) ದಿನಾಂಕ: 22-06-1996ರ ಅಂತರ ವಿಶ್ವವಿದ್ಯಾಲಯ ಮಂಡಳಿಯ ಸಭೆಯ ಶಿಫಾರಸ್ಸು ಸಂಖ್ಯೆ: 15:96ರಲ್ಲಿ ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳ

ಕಾಲೇಜುಗಳಿಂದ ವಸೂಲು ಮಾಡುವ ಸಂಯೋಜನಾ ಶುಲ್ಕದಲ್ಲಿ ಶೇ. 50ರಷ್ಟು ರಿಯಾಯಿತಿ ನೀಡಬಹುದೆಂಬ ನಿರ್ಣಯವನ್ನು ಎಲ್ಲಾ ವಿಶ್ವವಿದ್ಯಾಲಯಗಳು ಜಾರಿಗೊಳಿಸುವಂತೆ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸುಂದರ ರಾಜ ಗುಪ್ತ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ).

<u>ಇವರಿಗೆ:-</u>

(1) ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳು/ಕುಲಸಚಿವರು/ಆರ್ಥಿಕಾಧಿಕಾರಿಗಳು (ಕನ್ನಡ ಮತ್ತು ಮುಕ್ತ ವಿಶ್ವವಿದ್ಯಾಲಯಗಳನ್ನು ಹೊರತುಪಡಿಸಿ).
(2) ಕಾಲೇಜು ಶಿಕ್ಷಣ ಆಯುಕ್ತರು/ನಿರ್ದೇಶಕರು, ಕಾಲೇಜು ಶಿಕ್ಷಣ, ಬೆಂಗಳೂರು-560 001.
(3) ತಾಂತ್ರಿಕ ಶಿಕ್ಷಣ ನಿರ್ದೇಶಕರು, ಬೆಂಗಳೂರು - 560 001.
(4) ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ 200 ಪತ್ರಿಗಳನ್ನು ಒದಗಿಸಲು.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಸಂಯೋಜನೆ, ಹೊಸ ಕೋರ್ಸ್ ಪ್ರಾರಂಭ, ಸಂಯೋಜನೆ ಮುಂದುವರಿಕೆ, ಖಾಯಂ ಸಂಯೋಜನೆ ಇತ್ಯಾದಿಗಳ ಬಗ್ಗೆ, ಆನ್ ಲೈನ್ ಮುಖಾಂತರ ಪರಿಗಣಿಸುವ ಬಗ್ಗೆ.

**ಓದಲಾಗಿದೆ** :
1. ಸರ್ಕಾರಿ ಆದೇಶ ಸಂಖ್ಯೆ: ಇಡಿ 34 ಇಜಿಒವಿ 2020 (ಭಾಗ-2), ಬೆಂಗಳೂರು, ದಿನಾಂಕ: 09.06.2021.
2. ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರ ಪತ್ರ ಸಂಖ್ಯೆ: ಕರಾಉಶಿಪ/ ವಿಸಿಪಿ/ 01/ 2022/ 85, ದಿ: 25.01.2022.

*********

**ಪ್ರಸ್ತಾವನೆ:**

ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ವಿಶ್ವವಿದ್ಯಾಲಯಗಳ ಕಾಲೇಜುಗಳ ಸಂಯೋಜನೆ ಪ್ರಕ್ರಿಯೆ ಕಾರ್ಯಚಟುವಟಿಕೆಗಳಿಗೆ ಅನುಮೋದನೆ ನೀಡುವುದು ಸೇರಿದಂತೆ, ಮುಂಬರುವ ಶೈಕ್ಷಣಿಕ ವರ್ಷಗಳಲ್ಲಿ ಕಡ್ಡಾಯವಾಗಿ, ರಾಷ್ಟ್ರೀಯ ಮಾಹಿತಿ ಸಂಸ್ಥೆ (ಎನ್.ಐ.ಸಿ.) ಮುಖಾಂತರ ಉನ್ನತೀಕರಿಸಿ, ಉನ್ನತ ಶಿಕ್ಷಣ ಇಲಾಖೆಯು ನಿರ್ವಹಣೆ ಮಾಡುತ್ತಿರುವ ಆನ್‌ಲೈನ್ ಸಂಯೋಜನಾ ತಂತ್ರಾಂಶದ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿ, ಸ್ಥಳೀಯ ವಿಚಾರಣಾ ಸಮಿತಿಯ ವರದಿಗಳೊಂದಿಗೆ, ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 59 (10) ರನ್ವಯ ಅನುಮೋದನೆಗೆ ಸಲ್ಲಿಸಬೇಕಾಗಿರುತ್ತದೆ.

ಈ ಸಂಬಂಧ 2022-23ನೇ ಶೈಕ್ಷಣಿಕ ಸಾಲಿಗೆ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಆನ್ ಲೈನ್ ಸಂಯೋಜನಾ ತಂತ್ರಾಂಶದಲ್ಲಿ ಅಳವಡಿಸಿ, ಸಂಯೋಜನಾ ಪ್ರಕ್ರಿಯೆಯನ್ನು ಪ್ರಾರಂಭಿಸುವ ಬಗ್ಗೆ, ಸರ್ಕಾರದ ಅನುಮೋದನೆಗಾಗಿ ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, 2022-23ನೇ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ, ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಆನ್‌ಲೈನ್ ಸಂಯೋಜನಾ ತಂತ್ರಾಂಶದಲ್ಲಿ ಅಳವಡಿಸಿಕೊಂಡು, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳಿಗೆ ಸಂಯೋಜನಾ ಪ್ರಕ್ರಿಯೆಗಳಾದ Opening New colleges, Extension of existing affiliation, continuation of affiliation, permanent affiliation, change / addition of subject, division of faculty, increase of intake, change of name, closure and withdrawal of a college, local inquiry committee formation and transfer of management ಮುಂತಾದ ಕಾರ್ಯಚಟುವಟಿಕೆಗಳಿಗೆ ಅನುಮೋದನೆ ನೀಡುವುದು ಸೇರಿದಂತೆ, ರಾಷ್ಟ್ರೀಯ ಮಾಹಿತಿ ಸಂಸ್ಥೆ (ಎನ್.ಐ.ಸಿ.) ಮುಖಾಂತರವೇ ಆನ್‌ಲೈನ್ ಸಂಯೋಜನಾ ತಂತ್ರಾಂಶದ ಅರ್ಜಿಗಳನ್ನು ರಾಷ್ಟ್ರೀಯ ಶಿಕ್ಷಣ ನೀತಿ-2020 ಯಂತೆ ಆಹ್ವಾನಿಸಲು ಹಾಗೂ ಭರ್ತಿ ಮಾಡಿರುವ ಅರ್ಜಿಗಳನ್ನು ವಿಶ್ವವಿದ್ಯಾಲಯವು ನೇಮಿಸುವ ಸ್ಥಳೀಯ ವಿಚಾರಣಾ ಸಮಿತಿಯು ಪರಾಮರ್ಶಿಸಿ, ಸಮಿತಿಯ ಶಿಫಾರಸ್ಸನ್ನು ಆನ್‌ಲೈನ್ ಮುಖಾಂತರವೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ, ವಿಶ್ವವಿದ್ಯಾಲಯವು ತನ್ನ ಶಿಫಾರಸ್ಸಿನೊಂದಿಗೆ ಅಂತಿಮ ಆದೇಶಕ್ಕಾಗಿ ಸರ್ಕಾರಕ್ಕೆ ಸಂಯೋಜನಾ ಪ್ರಸ್ತಾವನೆಯನ್ನು ಸಲ್ಲಿಸಲು ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 34 ಇಜಿಒವಿ 2020 (ಭಾಗ-2),**
**ಬೆಂಗಳೂರು, ದಿನಾಂಕ: 26.04.2022**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, 2022-23ನೇ ಶೈಕ್ಷಣಿಕ ಸಾಲಿಗೆ ರಾಷ್ಟ್ರೀಯ ಮಾಹಿತಿ ಸಂಸ್ಥೆ (ಎನ್.ಐ.ಸಿ.) ಮುಖಾಂತರವೇ ಆನ್‌ಲೈನ್ ಸಂಯೋಜನಾ ತಂತ್ರಾಂಶದ ಅರ್ಜಿಗಳನ್ನು ರಾಷ್ಟ್ರೀಯ ಶಿಕ್ಷಣ ನೀತಿ-2020ಯಂತೆ ಆಹ್ವಾನಿಸಲು, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳ ಸಂಯೋಜನಾ ಪ್ರಕ್ರಿಯೆಗಳಾದ Opening New colleges, Extension of existing affiliation, continuation of affiliation, permanent affiliation, change / addition of subject, division of

faculty, increase of intake, change of name, closure and withdrawal of a college, local inquiry committee formation and transfer of management ಸಂಬಂಧಿಸಿದ ವಿವರಗಳನ್ನು ಆನ್‌ಲೈನ್ ಅರ್ಜಿಗಳಲ್ಲಿ ಭರ್ತಿ ಮಾಡಿ, ವಿಶ್ವವಿದ್ಯಾಲಯವು ನೇಮಿಸುವ ಸ್ಥಳೀಯ ವಿಚಾರಣಾ ಸಮಿತಿಯು ಪರಾಮರ್ಶಿಸಿ, ಸಮಿತಿಯ ಶಿಫಾರಸ್ಸನ್ನು ಆನ್‌ಲೈನ್ ಮುಖಾಂತರವೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ, ನಂತರ ವಿಶ್ವವಿದ್ಯಾಲಯವು ತನ್ನ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಸಂಯೋಜನಾ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಆದೇಶಿಸಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ,**

Sheetal M Hiremath

**(ಶೀತಲ್ ಎಂ ಹಿರೇಮಠ)**
ಸರ್ಕಾರದ ಅಧೀನ ಕಾರ್ಯದರ್ಶಿಗಳು
(ವಿಶ್ವವಿದ್ಯಾಲಯ-1),
ಉನ್ನತ ಶಿಕ್ಷಣ ಇಲಾಖೆ

**ಪ್ರತಿಯನ್ನು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001.
2. ಉಪಾಧ್ಯಕ್ಷರು, ಕರ್ನಾಟಕ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.
3. ಕುಲಪತಿಗಳು, ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
4. ಕುಲಸಚಿವರುಗಳು, ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
5. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001.
6. ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.
7. ಗೌರವಾನ್ವಿತ ರಾಜ್ಯಪಾಲರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ.
8. ಕಾರ್ಯದರ್ಶಿಗಳು, ಮಾನ್ಯ ಉಪಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ.
9. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ.
10. ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
11. ಸರ್ಕಾರದ ಉಪ ಕಾರ್ಯದರ್ಶಿಗಳು (ವಿಶ್ವವಿದ್ಯಾಲಯ), ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು.
12. ಸರ್ಕಾರದ ಉಪ ಕಾರ್ಯದರ್ಶಿಗಳು (ಕಾಲೇಜು), ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು.
13. ಸರ್ಕಾರದ ಉಪ ಕಾರ್ಯದರ್ಶಿಗಳು (ತಾಂತ್ರಿಕ ಶಿಕ್ಷಣ ಮತ್ತು ಯೋಜನೆ), ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು.
14. ವಿಶೇಷಾಧಿಕಾರಿಗಳು, ಇ-ಆಡಳಿತ ಘಟಕ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು.
15. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.